ಕೆಲವು ವರ್ಷಗಳ ಹಿಂದೆ ಲಂಡನ್ನಿನ ಹೀಥ್ರೋ ವಿಮಾನ ನಿಲ್ದಾಣದ ಸಮೀಪವೇ ನಾಲ್ಕಾರು ಗಗನಸಖಿಯರ ಜೊತೆಗೆ ಮೂರು ತಿಂಗಳು ವಾಸ ಮಾಡುವ ಸಂದರ್ಭ ನನಗೆ ಬಂದಿತ್ತು. ಮನೆಯೊಳಗಿನ ಚಂದದ ಗುಬ್ಬಿಗಳನ್ನು ಬಿಟ್ಟರೆ ಅಲ್ಲಿ ಸುತ್ತಮುತ್ತ ದೊಡ್ಡ ಪಕ್ಷಿಗಳೇನೂ ಇರಲಿಲ್ಲ. ಆದರೆ, ಲೋಹದ ಪಕ್ಷಿಗಳ ಕಾಟ! ಅದರಲ್ಲೂ ಅಪ್ಪಟ ಗರುಡನ ಚುಂಚನ್ನೇ ಹೋಲುವ ಚೂಪು ಮೂತಿಯ ಕಾಂಕಾರ್ಡ್ ವಿಮಾನಗಳು ನೆಲಬಿಟ್ಟು ಹೊರಟರೆ ಸಾಕು ಅದರ ಗರ್ಜನೆ ಇಡೀ ನಗರಕ್ಕೇ ಕೇಳಿಸುತ್ತಿತ್ತು. ನಾವಿದ್ದ ಮನೆಯ ಕಿಟಕಿಗಳು ಅದುರುವ ಅಬ್ಬರಕ್ಕೆ ನಾನಂತು ಮೊದಮೊದಲು ಮುಗಿಲು ಹರಿದು ಮೈಮೇಲೆ ಬಿದ್ದಂತೆ ದಿಗಿಲು ಬೀಳುತ್ತಿದ್ದೆ. ಘಟೋತ್ಕಚ, ಮೇಘನಾದರೆಲ್ಲ ಒಟ್ಟಾಗಿ ಅಬ್ಬರಿಸಿದಂತಿರುತ್ತಿತ್ತು ಆ ಸದ್ದು. ಶಬ್ದವೇಗವನ್ನೂ ಮೀರಿಸಿ ಸಾಗುವ ಈ ವಿಮಾನಗಳು ತಮ್ಮ ಉಡ್ಡಾಣದ ಅವಧಿಯ ಗದ್ದಲದ ಕೋಟಾವನ್ನೆಲ್ಲ ಮೂಟೆ ತುಂಬಿ ನಿಲ್ದಾಣದ ಸುತ್ತ ಎರಚಿ ಮೇಲಕ್ಕೇರುತ್ತಿದ್ದವು.

ಕೊನೆಗೂ ಈ ಭಯಂಕರ ಸದ್ದಿನ ಕಾರಣದಿಂದಲೇ ಅವುಗಳ ಹಾರಾಟವನ್ನು ನಿಲ್ಲಿಸಿದರು ಅನ್ನಿ. ಅದಕ್ಕೂ ಪಕ್ಷಿಗಳೇ ಕಾರಣ! ಕಾಂಕಾರ್ಡ್ ವಿಮಾನಗಳು ಇಳಿಯುವ ಏರುವ ನಗರಗಳ ಸುತ್ತಲಿನ ಎಲ್ಲ ಹ್ಯಾಚರಿಗಳ (ಅಂದರೆ ಕೋಳಿ ಸಾಕಣೆ ಕೇಂದ್ರಗಳ) ಮಾಲೀಕರು ಸರಕಾರಕ್ಕೆ ಅಹವಾಲು ಸಲ್ಲಿಸಿದ್ದರು. ಏಕೆಂದರೆ ಪ್ರತಿ ಬಾರಿ ಈ ವಿಮಾನ ಏರಿಳಿಯುವಾಗಲೂ ಗೂಡಿನಲ್ಲಿದ್ದ ಪಕ್ಷಿಗಳೆಲ್ಲ ಹೌಹಾರಿ, ಹಾರಿ ಹೋಗಲೂ ಆಗದೆ ಕೆಲವಂತೂ ಹಾರ್ಟ್‌ಫೇಲಾಗಿ ಸತ್ತಿದ್ದು, ಸಾಲುಸಾಲು ಕೋಳಿಗಳೆಲ್ಲ ಮೊಟ್ಟೆಯ ಬದಲು ತೆಳ್ಳನ್ನ ಆಮ್ಲೆಟ್ಟನ್ನೇ ಸುರಿಸಿದ್ದು ಆಗಾಗ ವರದಿಯಾಗುತ್ತಿತ್ತು. ಕಾಂಕಾರ್ಡ್ ಹಾರಾಟ ನಿಲ್ಲಿಸಿರೆಂಬ ಕೋಳಿಸಾಕಣೆ ಕೇಂದ್ರಗಳ ಅಹವಾಲಿಗೆ ಪ್ರತಿಯಾಗಿ ಶ್ರವಣಸಾಧನಗಳ ತಯಾರಕರು ಹಾಗೂ ಕಿವಿಮೂಗಿನ ಡಾಕ್ಟರ್‌ಗಳು ಹಾರಾಟವನ್ನು ನಿಲ್ಲಿಸಬೇಡಿರೆಂಬ ಅಹವಾಲು ಸಲ್ಲಿಸಿರುವ ಸಾಧ್ಯತೆ ಇದೆಯಾದರೂ ಆಗಿನ ವಿರೋಧಿಗಳ ಗದ್ದಲದಲ್ಲಿ ಅವರ ಮಾತು ಯಾರ ಕಿವಿಗೂ ಬಿದ್ದಂತಿಲ್ಲ. ಅಂತೂ ಕಾಂಕಾರ್ಡ್ ನಿಂತಿತು. ಪಕ್ಷಿಗಳು ವಿಮಾನವನ್ನು ಸುರಕ್ಷಿತವಾಗಿ ನೆಲಕ್ಕಿಳಿಸಿದ್ದು ಇದೇ ಮೊದಲ ಬಾರಿ ಇರಬೇಕು.

ಈಚೆಗೆ, ಕಣಜ ಕೀಟಗಳೂ ಆಸ್ಟ್ರೇಲಿಯಾದ ಬ್ರಿಸ್‌ಬೇನ್ ನಗರದಲ್ಲಿ ವಿಮಾನಗಳನ್ನು ಕೆಳಕ್ಕಿಳಿಸಿದ ಸುದ್ದಿ ಬಂದಿದೆ. ಚಿಕ್ಕ ರಂಧ್ರ ಇದ್ದಲ್ಲೆಲ್ಲ ಮಣ್ಣು ತುಂಬಿ ಮೊಟ್ಟೆ ಇಟ್ಟು, ತಿಂಡಿ ಇಟ್ಟು ಮತ್ತೆ ಮಣ್ಣಿನಿಂದಲೇ ಸೀಲ್ ಮಾಡಿ ಹಾರಿಹೋಗುವ ಈ ಜೇನ್ನೊಣದಂಥ ಕೀಟಗಳು ನಮಗೂ ಗೊತ್ತು. ಮನೆಯ ವಿದ್ಯುತ್ ಸಾಕೆಟ್‌ಗಳಿಗೆ ಅವು ಹೀಗೇ ಮಣ್ಣು ತುಂಬುತ್ತವೆ. ಗಾಳಿಯ ವೇಗವನ್ನು ಅಳೆಯಲೆಂದು ವಿಮಾನದ ಮೂತಿಯ ಮೇಲೆ ಪೆನ್ಸಿಲ್ ಗಾತ್ರದ ಮೂರು ರಂಧ್ರಗಳಿರುತ್ತವೆ. ಅದಕ್ಕೂ ಈ ಕುಂಬಾರನೊಣಗಳು ಮಣ್ಣು ತುಂಬಿದ್ದವಂತೆ. ಅದು ಗೊತ್ತಿಲ್ಲದೆ ಪೈಲಟ್ ತನ್ನ ವಿಮಾನವನ್ನು ಮೇಲೇರಿಸುವಾಗ ಕಾಕ್‌ಪಿಟ್‌ನ ಮೀಟರಿನ ಅಂಕಿಗಳು ಎರ್ರಾಬಿರ್ರಿ ಆಗಿದ್ದೇ, ಸದ್ಯ ಏನೂ ಭಾನಗಡಿ ಆಗದೆ ಎಲ್ಲರೂ ನೆಲಕ್ಕಿಳಿದರೆನ್ನಿ. ಈಗ ಅಲ್ಲಿ ಸಮರೋಪಾದಿಯಲ್ಲಿ ವಿಮಾನ ನಿಲ್ದಾಣಗಳ ಸುತ್ತಲಿನ ನೆಲದಲ್ಲಿ, ಹುಲ್ಲುಮೈದಾನದಲ್ಲಿ ಯಾವ ನೊಣವೂ ಇಲ್ಲದಂತೆ ಮಾಡಲು ಕೀಟನಾಶಕ ಸಿಂಪರಣೆ ನಡೆದಿದೆ. ನಮ್ಮ ಕಾಸರಗೋಡಿನಲ್ಲಿ ಗೇರುಮರಗಳಿಗೆ ಎಂಡೊಸಲ್ಫಾನ್ ಸಿಂಪರಣೆ ಮಾಡಿ, ಕೀಟಲೋಕ–ಪಕ್ಷಿಲೋಕಕ್ಕೆಲ್ಲ ವಿಷವುಣ್ಣಿಸಿದ ಹಾಗೆ ಅಲ್ಲೂ ಆ ಕೆಲಸಕ್ಕೆ ವಿಮಾನಗಳನ್ನೇ ಬಳಸಿರಬೇಕು. ಈಗಂತೂ ಪಕ್ಷಿಗಾತ್ರದ್ದೇ ಡ್ರೋನ್‌ಗಳು, ಕಣಜದ ಗಾತ್ರದ್ದೇ ಮೈಕ್ರೊಬಾಟ್‌ಗಳು ಬರುತ್ತಿವೆ.

ಸಕಲ ಜೀವಲೋಕವನ್ನೂ ಕಾಯಬೇಕಿದ್ದ ಆ ಜಗನ್ನಿಯಾಮಕ ಎಲ್ಲಿ ವಿರಮಿಸಿದ್ದಾನೊ? ಜಗತ್ತು ಹೀಗೆಯೇ ನಡೆಯಬೇಕೆಂದು ನಿಯಮಗಳನ್ನು ರೂಪಿಸಿ ದೇವರು ದೂರ ವಿರಮಿಸಿದ್ದಾನೆ ಎಂಬರ್ಥದಲ್ಲಿ